# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | :: | 1404 |
| ಸದಸ್ಯರ ಹೆಸರು | :: | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | :: | 18.03.2020 |
| ಉತ್ತರಿಸುವ ಸಚಿವರು | :: | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ನಿಯಮಗಳನ್ನು ಪಾಲಿಸದೇ 12.24 ಎಕರೆ ಸರ್ಕಾರಿ ಜಮೀನನ್ನು ಖಾಸಗಿ ವ್ಯಕ್ತಿಗೆ ಮಂಜೂರು ಮಾಡಿರುವ ವಿಚಾರ ಮಾಧ್ಯಮಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು<br><br>ರಾಯಭಾಗ ತಾಲ್ಲೂಕಿನ ಸುಲ್ತಾನಪುರ ಗ್ರಾಮದ ರಿ.ಸ.ನಂ.82/2 ರಲ್ಲಿ ಕ್ಷೇತ್ರ 12ಎ-24ಗುಂ. ಗಾಯರಾಣ ಜಮೀನಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿ, ಚಿಕ್ಕೋಡಿ ಇವರಲ್ಲಿ ಮೇಲ್ಮನವಿ ಸಲ್ಲಿಕೆಯಾಗಿದ್ದು, ಮೇಲ್ಮನವಿ ವಿಚಾರಣೆ ಹಂತದಲ್ಲಿರುತ್ತದೆ. |
| ಆ) | ಅಕ್ರಮ-ಸಕ್ರಮ ನಿಯಮದಡಿಯಲ್ಲಿ ಜಮೀನು ಮಂಜೂರು ಮಾಡಲು ಇರುವ ನಿಯಮಗಳೇನು (ವಿವರ ನೀಡುವುದು); | 1) ಅಕ್ರಮ ಸಾಗುವಳಿದಾರರು ನಮೂನೆ-50, 53 ಮತ್ತು 57ರಲ್ಲಿ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಬಹುದು.<br>2) ಸನ್ 2005ಕ್ಕಿಂತ ಪೂರ್ವದಲ್ಲಿ ಅತಿಕ್ರಮಣ ಮಾಡಿ ಸಾಗುವಳಿ ಮಾಡುತ್ತಿರಬೇಕು.<br>3) ಗರಿಷ್ಟ 4-38 ಎಕರೆ ಖುಷ್ಕಿ ಮತ್ತು 2ಎ-**29**ಗುಂಟೆ ತರಿ, ಬಾಗಾಯತ, ತೋಟದ ಜಮೀನು ಮಂಜೂರಿಸಲು ಅವಕಾಶ ಇರುತ್ತದೆ. |
| ಇ) | ಈ ನಿಯಮಗಳಡಿಯಲ್ಲಿ ಜಮೀನು ಮಂಜೂರು ಮಾಡಲು ಯಾರಿಗೆ ಅಧಿಕಾರವಿದೆ; | ಈ ನಿಯಮಗಳಡಿಯಲ್ಲಿ ಜಮೀನು ಮಂಜೂರು ಮಾಡಲು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಅಧಿಕಾರ ಇರುತ್ತದೆ. |
| ಈ) | ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ರಚಿಸಿದ ಸಮಿತಿ ತೆಗೆದುಕೊಂಡ ಠರಾವುಗಳಾವವು; | ಈಗಿರುವ ಸಮಿತಿ ಇಲ್ಲಿಯವರೆಗೆ ಯಾವುದೇ ಠರಾವು ತೆಗೆದುಕೊಂಡಿರುವುದಿಲ್ಲ. |
| ಉ) | ಈ ರೀತಿಯ ಅಕ್ರಮಗಳನ್ನು ಎಸಗಿದವರ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ? | ಪ್ರಕರಣಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿ, ಚಿಕ್ಕೋಡಿ ಇವರಲ್ಲಿ ಮೇಲ್ಮನವಿ ಸಲ್ಲಿಕೆಯಾಗಿದ್ದು, ಮೇಲ್ಮನವಿಯ ವಿಚಾರಣೆಯಿಂದ ಅಕ್ರಮ ಎಸಗಿರುವುದು ಕಂಡು ಬಂದಲ್ಲಿ ನಿಯಮಾನುಸಾರ ಕ್ರಮವಹಿಸಲಾಗುವುದು |

ಸಂಖ್ಯೆ: ಆರ್‌ಡಿ 26 ಎಲ್‌ಜಿಎಲ್ 2020

(ಆರ್.ಅಶೋಕ್)
ಕಂದಾಯ ಸಚಿವರು